

# ಕರಾವಳಿ ಚೆಲುವೆಯ ಸಿನಿಮಾ ಒಲವು

**ಜನರ ಮನದಲ್ಲಿ ಉಳಿದುಕೊಳ್ಳುವಂಥ ಪಾತ್ರಗಳಲ್ಲಿ ತಮ್ಮನ್ನು ತಾವು ಕಾಣಲು ಬಯಸುವ ಕರಾವಳಿ ಚೆಲುವೆ ಅದ್ವಿತಿ ಶೆಟ್ಟಿ ಅವರ ನಟನೆಯ ನಾಲ್ಕೈದು ಸಿನಿಮಾಗಳು ಬಿಡುಗಡೆಗೆ ಸಜ್ಜಾಗಿವೆ. ಅವರ 'ಬ್ರಹ್ಮಕಮಲ' ಚಿತ್ರ ಬೆಂಗಳೂರು ಸಿನಿಮೋತ್ಸವದಲ್ಲಿ ಪ್ರದರ್ಶನಗೊಂಡು ಮೆಚ್ಚುಗೆ ಪಡೆದುಕೊಂಡಿದೆ.**

■ **ಎಸ್ಸೆನ್**

'ಮಿಸ್ಟರ್ ಆ್ಯಂಡ್ ಮಿಸಸ್ ರಾಮಾಚಾರಿ' ಸಿನಿಮಾ ಮೂಲಕ ಚಂದನವನಕ್ಕೆ ಕಾಲಿಟ್ಟ ನಟಿ ಅದ್ವಿತಿ ಶೆಟ್ಟಿ, ಸಿನಿಮಾರಂಗದಲ್ಲಿ ಹೊಸ ಹಾದಿಗೆ ಹೊರಳುವ ಪ್ರಯತ್ನದಲ್ಲಿದ್ದಾರೆ. ಅವರ ನಟನೆಯ ಹಲವು ಸಿನಿಮಾಗಳು ಬಿಡುಗಡೆಗೆ ಸಿದ್ಧವಾಗಿದ್ದು, ತಮ್ಮ ಪಾತ್ರಗಳು ಜನರ ಮನಸ್ಸು ಮುಟ್ಟಲಿರುವ ಭರವಸೆ ವ್ಯಕ್ತಪಡಿಸಿದ್ದಾರೆ.

ಅದ್ವಿತಿ, ಸಿನಿಮಾ ರಂಗಕ್ಕೆ ಬಂದಿದ್ದೇ ಆಕಸ್ಮಿಕವಾಗಿ. ಓದು ಮುಗಿಸಿ ಕೆಲಸಕ್ಕೆಂದು ಮಂಗಳೂರಿನಿಂದ ಬೆಂಗಳೂರು ದಾರಿ ತುಳಿದ ಅವರಲ್ಲಿ ದುಡಿಮೆ ಹೊರತಾಗಿ ಬೇರಾವ ಆಲೋಚನೆಗಳೂ ಇರಲಿಲ್ಲ. ಎಂಬಿಎ ಓದಿ, ಒಳ್ಳೆ ಕೆಲಸಕ್ಕೆ ಸೇರಬೇಕೆಂದು ಬೆಂಗಳೂರಿಗೆ ಬಂದವರು, ಕಂಪನಿಯೊಂದರಲ್ಲಿ ಎಚ್‌ಆರ್ ಆಗಿ ಕೆಲಸಕ್ಕೂ ಸೇರಿಕೊಂಡರು. ಆದರೆ ಆಕಸ್ಮಿಕವಾಗಿ ತೆರೆದುಕೊಂಡ ಸಿನಿಮಾರಂಗದ ಬಾಗಿಲು ಅವರ ಬದುಕಿನ ದಿಕ್ಕನ್ನೇ ಬದಲಿಸಿತ್ತು.

ಮಂಗಳೂರಿನಲ್ಲಿ ಹುಟ್ಟಿ ಬೆಳೆದ ಅದ್ವಿತಿಗೆ ಶಾಲಾ–ಕಾಲೇಜು ದಿನಗಳಲ್ಲಿ ಕ್ರೀಡೆ ಮೇಲೆ ಅಪಾರ ಒಲವು. ರನ್ನಿಂಗ್, ಕಬಡ್ಡಿ, ಥ್ರೋಬಾಲ್ ಯಾವುದೇ ಇದ್ದರೂ ಸ್ಪರ್ಧೆಯಲ್ಲಿ ಅದ್ವಿತಿ–ಅಶ್ವಿತಿ ಅವಳಿ ಸೋದರಿಯರ ಹೆಸರು ಕಡ್ಡಾಯ. ಇದರೊಂದಿಗೆ, ನೃತ್ಯದ ಮೇಲೆ ಕೂಡ ಹೆಚ್ಚೇ ಪ್ರೀತಿ. ನೃತ್ಯ ತಂಡದೊಂದಿಗೆ ಗುರುತಿಸಿಕೊಂಡ ಅವರು, ಹಲವು ಕಡೆ ನೂರಾರು ಪ್ರದರ್ಶನ ನೀಡಿದ್ದಾರೆ. ನೃತ್ಯದ ಮೂಲಕ ರಿಯಾಲಿಟಿ ಶೋಗಳಲ್ಲಿ ಭಾಗವಹಿಸಿದ್ದಾರೆ.

ಐದು ರಿಯಾಲಿಟಿ ಶೋಗಳಲ್ಲಿ ಭಾಗವಹಿಸಿದ್ದರೂ ಅದ್ವಿತಿ ಅವರಲ್ಲಿ ಮಾತ್ರ, ಎಂದಿಗಾದರೂ ತಾನು ಸಿನಿಮಾ ಕಡೆಗೆ ಹೋಗುತ್ತೇನೆಂಬ ಸುಳಿವಾಗಲಿ, ಆ ಬಗ್ಗೆ ಕಿಂಚಿತ್ತು ಆಸಕ್ತಿಯಾಗಲಿ ಇರಲೇ ಇಲ್ಲ. ಅಚಾನಕ್ಕೆಂಬಂತೆ, ಈ ಅವಳಿ ಸೋದರಿಯರಿಗೆ 'ಮಿಸ್ಟರ್ ಆ್ಯಂಡ್ ಮಿಸಸ್ ರಾಮಾಚಾರಿ' ಸಿನಿಮಾದಲ್ಲಿ ನಟಿಸುವ ಆಫರ್ ಬಂದಿತ್ತು. ಆದರೆ, ಖುಷಿಗಿಂತ ಹೆಚ್ಚಾಗಿ ಹಿಂಜರಿಕೆಯಿಂದಲೇ ಸಿನಿಮಾಗೆ ಒಪ್ಪಿಗೆ ಸೂಚಿಸಿದ್ದರು.

'ಯಾಕೆ ಸಿನಿಮಾಗೆ ಆಯ್ಕೆ ಮಾಡಿದರು ಎಂಬುದೇ ನಮಗೆ ದೊಡ್ಡ ಆಶ್ಚರ್ಯವಾಗಿತ್ತು. ನಮಗೂ ಸಿನಿಮಾದೆಡೆಗೆ ಆಸಕ್ತಿ ಇಲ್ಲದಿದ್ದರಿಂದ ಸ್ವಲ್ಪ ಹಿಂಜರಿಕೆಯಿಂದಲೇ ಒಪ್ಪಿಗೆ ಸೂಚಿಸಿದ್ದೆವು. ಆದರೆ ಮೊದಲ ಸಿನಿಮಾದಿಂದಲೇ ಜನರು ನಮ್ಮನ್ನು ಗುರುತಿಸಲು ಆರಂಭಿಸಿದ್ದು ಕಂಡು ತುಂಬಾ ಖುಷಿಯಾಯಿತು. ಚಿತ್ರರಂಗದಲ್ಲೇ ಇದ್ದು, ಇಲ್ಲೇ ನನ್ನ ದಾರಿ ಕಂಡುಕೊಳ್ಳಬೇಕೆಂಬ ಆಸೆ ಹುಟ್ಟಿತು' ಎಂದು ಸಂತಸದಿಂದ ಹೇಳುತ್ತಾರೆ ಅದ್ವಿತಿ.

'ಕ್ರೀಡೆಯಲ್ಲಿ ಭಾಗವಹಿಸುವಿಕೆಯೇ ಮುಖ್ಯ. ಕ್ರೀಡಾಪಟು ಆಗಿದ್ದ ನಾನು ಇದೇ ಮನೋಭಾವವನ್ನು ಸಿನಿಮಾದಲ್ಲೂ ಅಳವಡಿಸಿಕೊಂಡಿದ್ದೇನೆ. ಸಿನಿಮಾದಲ್ಲಿ ನಟಿಸಬೇಕು. ನನ್ನ ಪ್ರಯತ್ನವನ್ನೆಲ್ಲ ಮೀರಿ ಉತ್ತಮ ನಟನೆ ನೀಡಬೇಕು. ಯಾವುದೇ ಅವಕಾಶ ಸಿಕ್ಕರೂ ಸಮರ್ಥವಾಗಿ ಬಳಸಿಕೊಳ್ಳಬೇಕು. ಇದೇ ನನ್ನ ಆದ್ಯತೆ' ಎನ್ನುತ್ತಾರೆ.

ಸಿನಿಮಾರಂಗದ ಯಾವುದೇ ಹಿನ್ನೆಲೆಯಿಲ್ಲದೆ ಬಂದ ಅದ್ವಿತಿಗೆ ಮೊದಮೊದಲು ಸಿನಿಮಾ ಕ್ಷೇತ್ರದ ಬಗ್ಗೆ ಆತಂಕವೇ ಹೆಚ್ಚಿತ್ತು. ಆದರೆ ಒಂದೊಂದೇ ಅನುಭವಗಳು ಅವರನ್ನು ಕೈಹಿಡಿದು ನಡೆಸಲು ಆರಂಭಿಸಿದವು. ಮೊದಲ ಸಿನಿಮಾ ನಂತರ 'ದೊಡ್ಮನೆ ಹುಡುಗ', 'ಗಿರಿಗಿಟ್ಲೆ', 'ಸುಳಿ'... ಸರಣಿ ಸಿನಿಮಾಗಳು ಅವರ ಪಾಲಿಗೆ ಒದಗಿಬಂದವು.